ಕರ್ನಾಟಕ ವಿಧಾನಸಭೆ

ಪ್ರಶ್ನೆ ಸಂಖ್ಯೆ	ಎಲ್.ಎ.ಕ್ಯೂ .1533
ಸದಸ್ಯರ ಹೆಸರು	ಶ್ರೀ /ಶ್ರೀಮತಿ . ಉಮೇಶ್ (ಹುಕ್ಕೇರಿ)
ಉತ್ತರಿಸಬೇಕಾದ ದಿನಾಂಕ	24/07/2024
ಉತ್ತರಿಸುವ ಸಚಿವರು	ಮಾನ್ಯ ಕೃಷಿ ಸಚಿವರು .

ಕ್ರ .ಸಂ.	ಪ್ರಶ್ನೆ	ಉತ್ತರ
ಅ)	ಸರ್ಕಾರದಿಂದ ಕಬ್ಬು ಕಟಾವು ಯಂತ್ರಗಳಿಗೆ ಸಹಾಯಧನ ನೀಡಲಾಗುತ್ತಿದೆಯೇ ; ಹಾಗಿದ್ದಲ್ಲಿ , ಎಷ್ಟು ಸಹಾಯಧನ ನೀಡಲಾಗುತ್ತಿದೆ ; ಕಳೆದ ಎರಡು ಆಯವ್ಯಯದಲ್ಲಿ ಮತ್ತು ಪ್ರಸ್ತುತ ಸಾಲಿನಲ್ಲಿ ಇದಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು ;	ಸರ್ಕಾರದಿಂದ ಕಬ್ಬು ಕಟಾವು ಯಂತ್ರಗಳಿಗೆ ಪ್ರತ್ಯೇಕವಾಗಿ ಸಹಾಯಧನವನ್ನು ನೀಡಲಾಗುತ್ತಿಲ್ಲ . ಆದಾಗ್ಯೂ , ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಕಬ್ಬು ಕಟಾವು ಯಂತ್ರ ಖರೀದಿಗೆ ಗರಿಷ್ಠ ರೂ.50.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ . ಕಳೆದ ಎರಡು ಆಯವ್ಯಯದಲ್ಲಿ ಕಬ್ಬು ಕಟಾವು ಯಂತ್ರಗಳಿಗೆ ಸಹಾಯಧನ ಒದಗಿಸಲು ಯಾವುದೇ ಪ್ರತ್ಯೇಕ ಅನುದಾನ ಮೀಸಲಿಟ್ಟಿರುವುದಿಲ್ಲ . ಆದಾಗ್ಯೂ , 2023-24 ನೇ ಸಾಲಿನಲ್ಲಿ ಹೈಟೆಕ್ ಹಾರ್ವೆಷ್ಟರ್ ಯೋಜನೆಯಡಿ ಶುಗರ್ ಕೇನ್ ಹಾರ್ವೆಸ್ಟರ್ ಗಳಿಗೆ ರೂ.3173.23 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ . ಮುಂದುವರೆದು, 2024-25 ನೇ ಸಾಲಿನಲ್ಲಿ ಹೈಟೆಕ್ ಹಾರ್ವೆಷ್ಟರ್ ಹಬ್ ಯೋಜನೆಗೆ ರೂ.4500.00 ಲಕ್ಷಗಳ ಅನುದಾನವನ್ನು ಮೀಸಲಿರಿಸಲಾಗಿದೆ .
ಆ)	ಕಳೆದ 2 ವರ್ಷ ಮತ್ತು ಪ್ರಸ್ತುತ ವರ್ಷದಲ್ಲಿ ಕಬ್ಬು ಕಟಾವು ಯಂತ್ರಕ್ಕೆ ಸಹಾಯಧನ ಕೋರಿ ಒಟ್ಟು ಸ್ವೀಕೃತವಾಗಿರುವ ಅರ್ಜಿಗಳೆಷ್ಟು ; ಆ ಪೈಕಿ ಈಗಾಗಲೇ ಎಷ್ಟು ರೈತರಿಗೆ ಸಹಾಯಧನ ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)	ಕಳೆದ 2 ವರ್ಷ ಮತ್ತು ಪ್ರಸ್ತುತ ವರ್ಷದವರೆಗೆ ಕಬ್ಬು ಕಟಾವು ಯಂತ್ರಕ್ಕೆ ಸಹಾಯಧನ ಕೋರಿ ಒಟ್ಟು 270 ಅರ್ಜಿಗಳು ಸ್ವೀಕೃತವಾಗಿರುತ್ತದೆ . ಇದರಲ್ಲಿ , 75 ಫಲಾನುಭವಿಗಳಿಗೆ ಸಹಾಯಧನ ಮಂಜೂರು ಮಾಡಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ . (ಒಟ್ಟು - 4 ಪುಟಗಳು)
ಇ)	ಇನ್ನೂ ಬಾಕಿ ಉಳಿದ ಅರ್ಜಿದಾರರಿಗೆ ಸಹಾಯಧನ ಯಾವಾಗ ಮಂಜೂರು ಮಾಡಲು ಉದ್ದೇಶಿಸಲಾಗಿದೆ ?	ಅನುದಾನದ ಲಭ್ಯತೆಯ ಆಧಾರದ ಮೇಲೆ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯ ಮಾರ್ಗಸೂಚಿ ಅನುಸಾರ ಕಬ್ಬು ಕಟಾವು ಯಂತ್ರಗಳಿಗೆ ಸ್ವೀಕರಿಸಿದ ಅರ್ಜಿಗಳಿಗೆ ಸಹಾಯಧನ ಒದಗಿಸಲು ಕ್ರಮ ಕೈಗೊಳ್ ಳಲಾಗುತ್ತಿದೆ .

ಕೃಷಿ ನಿರ್ದೇಶಕರು